## ‘ಫಾರ್ಮುಲಾ ಒನ್’ ಇತಿಹಾಸದಲ್ಲಿ ಹ್ಯಾಮಿಲ್ಟನ್ ಹೊಸ ಬೆಳೆ

# ರೇಸಿಂಗ್ ಅಂಗಳದ ಬ್ಲ್ಯಾಕ್ ಡೈಮಂಡ್

**ಎಪ್ಪತ್ತು ವರ್ಷಗಳ ‘ಫಾರ್ಮುಲಾ ಒನ್’ ಇತಿಹಾಸದಲ್ಲಿ ಕಪ್ಪುವರ್ಣೀಯ ಚಾಂಪಿಯನ್ ಎನಿಸಿಕೊಂಡ ಮೊದಲಿಗ ಲೂಯಿಸ್ ಹ್ಯಾಮಿಲ್ಟನ್. ಮೈಕಲ್ ಶೂಮಾಕರ್ ದಾಖಲೆಯನ್ನು ಸರಿಗಟ್ಟಿರುವ ಹೊತ್ತಿನಲ್ಲಿ ಈ ಸಾಧಕನು ಕಪ್ಪು ಮಣ್ಣಿನಲ್ಲಿ ಬಿತ್ತಿದ ಫಲವತ್ತಾದ ಯಶೋಬೆಳೆಯನ್ನು ಕಣ್ತುಂಬಿಕೊಳ್ಳುವುದು ಹಿತಾನುಭವ.**

■ **ವಿಶಾಖ ಎನ್.**




‘ವಿ ಆರ್ ದಿ ಚಾಂಪಿಯನ್ಸ್… ವಿ ಆರ್ ದಿ ಚಾಂಪಿಯನ್ಸ್…’ ಎಂದು 2008ರಲ್ಲಿ ಅಪ್ಪ–ಮಗ ಕಾರಿನಲ್ಲಿ ಹಾಡಿಕೊಂಡು ಸಾಗಿದ್ದರು. ಶಾಂಪೇನ್ ಬುರುಗು ಸಂಭ್ರಮಕ್ಕೆ ಮೆರುಗು. ಮಗನ ಹೆಸರು ಲೂಯಿಸ್ ಕಾರ್ಲ್ ಡೇವಿಡ್‌ಸನ್ ಹ್ಯಾಮಿಲ್ಟನ್. ಅಪ್ಪ ಆಂಥನಿ ಹ್ಯಾಮಿಲ್ಟನ್. ‘ಬ್ರಿಟಿಷ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್’ನಲ್ಲಿ ಮೊದಲ ಸಲ ಚಾಂಪಿಯನ್ ಆದ ಸಂದರ್ಭ ಅದು.

ಈ ವರ್ಷ ಕೋವಿಡ್ ಕಾಡಿತು. ಹ್ಯಾಮಿಲ್ಟನ್ ತಣ್ಣಗೇ ಇದ್ದರು. ಈ ಸಲ ಫಾರ್ಮುಲಾ ಒನ್ ಹೋರಾಟ ಜನಾಂಗೀಯ ದ್ವೇಷದ ವಿರುದ್ಧ ಎಂದೇ ಅವರು ಪದೇ ಪದೇ ಹೇಳುತ್ತಿದ್ದರು. ಖುದ್ದು ಕಪ್ಪು ಬ್ರಿಟಿಷ್ ಎಂದು ತಮ್ಮನ್ನು ಚಿಕ್ಕಪ್ರಾಯದಲ್ಲೇ ಕರೆದುಕೊಂಡ ಹ್ಯಾಮಿಲ್ಟನ್ ಬದುಕಿನಲ್ಲಿ ಮೂದಲಿಕೆಗಳನ್ನು ಎದುರಿಸಿದವರು. ಬೇರೆ ಬೇರೆ ದೇಶಗಳಲ್ಲಿ ರೇಸ್ ಅಭಿಮಾನಿಗಳು ಕಪ್ಪು ಬಣ್ಣವನ್ನು ಹೀಯಾಳಿಸಿ, ಘೋಷವಾಕ್ಯಗಳನ್ನು ಕೂಗಿ, ಪ್ಲೇಕಾರ್ಡ್‌ಗಳನ್ನು ತೋರಿ ಪ್ರಚೋದಿಸಿದರೂ ಹ್ಯಾಮಿಲ್ಟನ್ ತಮ್ಮೆಲ್ಲ ಸೆಡವನ್ನು ಕಾರು ರೇಸಿನ ಉತ್ಕಟತೆಯಾಗಿಸಿಕೊಂಡರಷ್ಟೆ. ಸ್ಪರ್ಧಿ ಬೊಟ್ಟಾಸ್ ಅನ್ನು 37ನೇ ಲ್ಯಾಪ್‌ನಲ್ಲಿ ಹಿಂದಿಕ್ಕಿ ಟರ್ಕಿಯಲ್ಲಿ ಸಾಧನೆ ಮೆರೆದ ಹ್ಯಾಮಿಲ್ಟನ್, ಮೈಕಲ್ ಶೂಮಾಕರ್ ಹೆಸರಿನಲ್ಲಿ ಇರುವ ದಾಖಲೆಯೊಂದನ್ನು ಸರಿಗಟ್ಟಿದರು. ಏಳು ಸಲ ಡ್ರೈವರ್ಸ್ ವಿಶ್ವ ಚಾಂಪಿಯನ್ ಎನಿಸಿಕೊಂಡ ದಾಖಲೆ ಅದು. ಈ ಸಲ 10ನೇ ರೇಸ್ ಗೆದ್ದು ಬೀಗಿದ ಬ್ರಿಟನ್‌ನ